ದಿಃ 14.08.2024ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿಸವಾಲುಃ ಶ್ರೀ ಕೆ.ಆರ್.ಪಿ., 9, 16 ಮತ್ತು 17ನೇ ಪ್ರತಿವಾದಿಗಳ ಪರ ವಕೀಲರಿಂದಃ

3. ನಾನು ನನ್ನ ತಂದೆ ರಾಮಸ್ವಾಮಿ ಮತ್ತು ನನ್ನ ಅಕ್ಕ ಜಯಲಕ್ಷ್ಮಿ ಯವರ ಜಿ.ಪಿ.ಎ ಹೋಲ್ಡರ್ ಆಗಿ ಅಸಲು ದಾವಾ ಸಂಖ್ಯೆ 3649/2007 ಅನ್ನು ಸಲ್ಲಿಸಿದ್ದೆ ಎಂದರೆ ನನಗೆ ನೆನಪಿಲ್ಲ. ಸದರಿ ದಾವಾವನ್ನು ಕಾಡಬೀಸನಹಳ್ಳಿ ಗ್ರಾಮದ ಸರ್ವೆ ನಂಃ 17/1 ಮತ್ತು 17/2 ರ ಸ್ವತ್ತಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿತ್ತು ಎಂದರೆ ಸುಳ್ಳು. ಸದರಿ ದಾವೆಯು ದಿಃ 26.10.2023 ರಲ್ಲಿ ನೀಡಲಾದ ತೀರ್ಪಿನಂತೆ ವಜಾ ಆಗಿದೆ ಎಂದರೆ ಸುಳ್ಳು. ಮೇಲೆ ಹೇಳಿದ ಸ್ವತ್ತುಗಳು ನನ್ನ ತಂದೆ ಸೇರಿದ ಸ್ವಯಾರ್ಜಿತ ಸ್ವತ್ತುಗಳು ಎನ್ನುವ ವಾದವನ್ನು ಮುಂದು ಮಾಡಿ ಅಸಲು ದಾವಾ ಸಂಖ್ಯೆ 3649/2007 ಅನ್ನು ಸಲ್ಲಿಸಲಾಗಿತ್ತು ಎಂದರೆ ಸುಳ್ಳು. ಸದರಿ ದಾವಾ ವಜಾ ಆಗುತ್ತದೆ ಎನ್ನುವ ವಿಚಾರ ನನ್ನ ತಿಳುವಳಿಕೆಗೆ ಬಂದ ನಂತರದಲ್ಲಿ ನಾವು ಈ ದಾವಾದಲ್ಲಿ ಅರ್ಜಿಯನ್ನು ಸಲ್ಲಿಸಿ ಪಕ್ಷಕಾರರಾಗಿ ಸೇರಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

4. ನಾವು ಈ ದಾವಾದಲ್ಲಿ ಪಕ್ಷಕಾರರಾಗಿ ಸೇರಲು ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ಈ ಪ್ರಕರಣದ ದಾವಾ ಸ್ವತ್ತುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ತೆಗೆಸಿ ನೋಡಿರುತ್ತೇವೆ. ಈ ಪ್ರಕರಣದ ದಾವಾ ಸ್ವತ್ತುಗಳು ಮುನಿಗ ಅಲಿಯಾಸ್ ಚಿಕ್ಕತಾಯಪ್ಪ ಎನ್ನುವವರಿಗೆ ಸೇರಿದೆ ಎಂದು ತೋರಿಸಲು ನಮ್ಮ ಬಳಿ ದಾಖಲೆ ಇದೆ. ಅಂತಹ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನಮಗೆ ತೊಂದರೆ ಇಲ್ಲ. ದಾವಾ ಸ್ವತ್ತುಗಳು ಮುನಿಗ ಅಲಿಯಾಸ್ ಚಿಕ್ಕತಾಯಪ್ಪನವರ ಹೆಸರಿನಲ್ಲಿ ಇಲ್ಲ ಹಾಗು ಆ ಸ್ವತ್ತುಗಳು ಎಂದೂ ಮುನಿಗ ಅಲಿಯಾಸ್ ಚಿಕ್ಕತಾಯಪ್ಪನವರಿಗೆ ಸೇರಿರಲಿಲ್ಲ ಎಂದರೆ ಸರಿಯಲ್ಲ.

5. ಕಾಡಬೀಸನಹಳ್ಳಿ ಗ್ರಾಮದ ಸರ್ವೆ ನಂಃ 17/1, 17/3 ಮತ್ತು 17/4ರ ಸ್ವತ್ತುಗಳನ್ನು 2 ರಿಂದ 4ನೇ ಪ್ರತಿವಾದಿಯರ ತಂದೆಯಾದ ದೊಡ್ಡಗುಳ್ಳಪ್ಪ ರವರು 1962ರಲ್ಲಿ ಕ್ರಯಪತ್ರದ

ಮೂಲಕ ಖರೀದಿಸಿದ್ದರು ಎಂದರೆ ಸುಳ್ಳು. ಈ ಸ್ವತ್ತುಗಳು ದೊಡ್ಡಗುಳ್ಳಪ್ಪನವರ ಸ್ವಯಾರ್ಜಿತ ಸ್ವತ್ತುಗಳಾಗಿದ್ದವು ಎಂದರೆ ಸುಳ್ಳು. ದಿಃ 4.9.1963ರಲ್ಲಿ ದೊಡ್ಡಗುಳ್ಳಪ್ಪನವರು ಸರ್ವೆ ನಂಃ 17/1 ರ 3 ಎಕರೆ 31 ಗುಂಟೆ ಜಮೀನನ್ನು ಅಬ್ಬಯ್ಯ ರೆಡ್ಡಿ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ದಿಃ 4.8.1969ರಂದು ಅಬ್ಬಯ್ಯ ರೆಡ್ಡಿಯವರು ಸದರಿ ಜಮೀನನ್ನು 2 ರಿಂದ 4ನೇ ಪ್ರತಿವಾದಿಯರ ತಾಯಿ ಮುನಿಯಮ್ಮನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು.

6. ದಿಃ 27.3.1999 ರಂದು ವಿಶೇಷ ತಹಶೀಲ್ದಾರ್ ರವರು ದಾವಾ ಸ್ವತ್ತುಗಳ ಸರ್ವೆ ನಂಬರ್ ಬದಲಾವಣೆಗೆ ಸಂಬಂಧಿಸಿದಂತೆ ಒಂದು ಆದೇಶವನ್ನು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಃ17/1ರ 1.18 ಎಕರೆ ಜಮೀನು ರಿಂಗ್ ರೋಡ್ ಗಾಗಿ ಭೂಸ್ವಾಧೀನಗೊಂಡಿರುವ ವಿಚಾರ ನನಗೆ ತಿಳಿದಿದೆ. ಆ ಬಾಬ್ತು ಬಂದಿರುವ ಪರಿಹಾರದ ಹಣದಲ್ಲಿ ಭಾಗ ಬೇಕು ಎಂದು ನನ್ನ ಅಜ್ಜಿ ಅಕ್ಕಮ್ಮರವರು ಪಾಲು ಕೇಳಿದ್ದರು. ಆ ಬಗ್ಗೆ ಅವರು ನಾರಾಯಣಸ್ವಾಮಿ ರವರಲ್ಲಿ ಬಾಯಿಮಾತಿನ ಮೂಲಕ ಕೇಳಿದ್ದರು. ನಾನು ಹೇಳಿರುವಂತೆ ಅಕ್ಕಮ್ಮನವರು ಭೂ ಸ್ವಾಧೀನದ ಪರಿಹಾರದ ಹಣದಲ್ಲಿ ಯಾವುದೇ ಪಾಲನ್ನು ಕೇಳಿರಲಿಲ್ಲ ಮತ್ತು ನಾನು ಈ ಬಗ್ಗೆ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

7. 2 ರಿಂದ 4ನೇ ಪ್ರತಿವಾದಿಯವರು ದಿಃ 23.10.2002ರ ಕ್ರಯಪತ್ರದಂತೆ ಸರ್ವೆ ನಂಃ 17/1 ರಲ್ಲಿನ ಉಳಿಕೆ 1.18ಎಕರೆ ಜಮೀನನ್ನು 11 ಮತ್ತು 12ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಬಳಿಕ 11 ಮತ್ತು 12ನೇ ಪ್ರತಿವಾದಿಯವರು ಸದರಿ ಸ್ವತ್ತಿನಲ್ಲಿ 31 ಗುಂಟೆ ಜಮೀನನ್ನು ದಿಃ 8.1.2004ರ ಕ್ರಯಪತ್ರದಂತೆ M/s. Integrated Labway Private Limited ನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಸದರಿ

ಸಂಸ್ಥೆಯವರು ಆ ಸ್ವತ್ತನ್ನು ದಿಃ 16.4.2014ರ ಕ್ರಯಪತ್ರದಂತೆ 16ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು.

8. 2 ರಿಂದ 4ನೇ ಪ್ರತಿವಾದಿಯರು ಸರ್ವೆ ನಂಃ 17/4ರ 30 ಗುಂಟೆ ಜಮೀನನ್ನು ದಿಃ23.10.2002ರ ಕ್ರಯಪತ್ರದಂತೆ 10ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. 10ನೇ ಪ್ರತಿವಾದಿಯು ಸದರಿ ಸ್ವತ್ತನ್ನು ದಿಃ 8.1.2004 ರ ಕ್ರಯಪತ್ರದಂತೆ M/s. Integrated Labway Private Limited ನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಸದರಿ ಸಂಸ್ಥೆಯವರು ದಿಃ 16.4.2004ರ ಕ್ರಯಪತ್ರದಂತೆ ಆ ಸ್ವತ್ತನ್ನು 16ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು.

9. 2 ರಿಂದ 4ನೇ ಪ್ರತಿವಾದಿಯರು ಸರ್ವೆ ನಂಃ 17/3ರ 1.13 ಎಕರೆ ಜಮೀನನ್ನು ದಿಃ23.10.2002ರ ಕ್ರಯಪತ್ರದಂತೆ 10ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. 10ನೇ ಪ್ರತಿವಾದಿಯು ಸದರಿ ಸ್ವತ್ತನ್ನು ದಿಃ 8.1.2004 ರ ಕ್ರಯಪತ್ರದಂತೆ M/s. Integrated Labway Private Limited ನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಸದರಿ ಸಂಸ್ಥೆಯವರು ದಿಃ 16.4.2004ರ ಕ್ರಯಪತ್ರದಂತೆ ಆ ಸ್ವತ್ತನ್ನು 16ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು.

10. ನನ್ನ ತಂದೆ ರಾಮಸ್ವಾಮಿಯವರು ದಿಃ 12.8.1982ರ ಕ್ರಯಪತ್ರದಂತೆ ಅಣ್ಣಯ್ಯ ರೆಡ್ಡಿಯವರಿಂದ ಸರ್ವೆ ನಂಃ 17/4ರ 3ಎಕರೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸುಳ್ಳು. RRTCR 564/98-99 ರಲ್ಲಿನ ಆದೇಶದಂತೆ ಆ ಜಮೀನಿನ ಸರ್ವೆ ನಂಃ 17/1 ರಲ್ಲಿ 27ಗುಂಟೆ ಹಾಗು 17/2 ರಲ್ಲಿ 2ಎಕರೆ 13ಗುಂಟೆ ಎಂದು ತಿದ್ದುಪಡಿ ಆಗಿದೆ ಎಂದರೆ ಸುಳ್ಳು. ನನ್ನ ತಂದೆಯವರು ಸರ್ವೆ ನಂಃ17/1ರ 27ಗುಂಟೆ ಜಮೀನನ್ನು ದಿಃ31.12.1999ರಂದು ಮಾಡಲಾದ ದಾನಪತ್ರದಂತೆ ನನ್ನ ಅಕ್ಕ ಜಯಲಕ್ಷ್ಮಮ್ಮನವರಿಗೆ ನೀಡಿರುತ್ತಾರೆ ಎಂದರೆ ಸುಳ್ಳು.

11. ನಾನು ಈ ದಾವಾದಲ್ಲಿ ಸಾಕ್ಷಿ ನುಡಿಯುವ ಪೂರ್ವದಲ್ಲಿ ನನ್ನ ತಂದೆಯವರಿಂದ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಪಡೆದಿರುತ್ತೇನೆ. ನನ್ನ ತಂದೆಯವರು ಸರ್ವೆ ನಂ:17/1 ಮತ್ತು 17/2ರ ಜಮೀನುಗಳಿಗೆ ಸಂಬಂಧಿಸಿದಂತೆ ಬರೆಸಿಕೊಂಡಿದ್ದ ಕ್ರಯಪತ್ರ ಹಾಗು ಜಯಲಕ್ಷ್ಮಮ್ಮನವರಿಗೆ ಬರೆದ ದಾನಪತ್ರದ ಬಗ್ಗೆ ತಿಳಿಸಿದ್ದರು. ಜಯಲಕ್ಷ್ಮಮ್ಮನವರು ಸರ್ವೆ ನಂ:17/1ರ 27ಗುಂಟೆ ಜಮೀನನ್ನು ದಿ:18.11.2000ದ ಕ್ರಯಪತ್ರದಂತೆ ದಾಮೆಗುಂಟೆ ರಾಜೇಶ್ವರಂ ನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಸದರಿ ವ್ಯಕ್ತಿಯು ಆ ಸ್ವತ್ತನ್ನು ದಿ:9.3.2004 ರ ಕ್ರಯಪತ್ರದಂತೆ 16ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು.

12. ಬಸಪ್ಪ ಎನ್ನುವವರು ಸರ್ವೆ ನಂ:17/2ರ 2ಎಕರೆ 13ಗುಂಟೆ ಜಮೀನನ್ನು ದಿ:24.9.1958 ರ ಕ್ರಯಪತ್ರದಂತೆ ಖರೀದಿಸಿದ್ದರು ಎಂದರೆ ಸರಿಯಲ್ಲ. RRTCR 27/99 ರಲ್ಲಿನ ಆದೇಶದಂತೆ ಸದರಿ ಜಮೀನಿನ ಸರ್ವೆ ನಂ:17/4 ಎಂದು ತಿದ್ದುಪಡಿ ಆಗಿದೆ ಎಂದರೆ ಸರಿಯಲ್ಲ. ಬಸಪ್ಪನವರು ಸದರಿ ಸ್ವತ್ತನ್ನು ದಿ: 15.12.2003ರ ಕ್ರಯಪತ್ರದಂತೆ M/s. Integrated Labway Private Limited ನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಸದರಿ ಸಂಸ್ಥೆಯವರು ಆ ಸ್ವತ್ತನ್ನು ದಿ:16.4.2004ರ ಕ್ರಯಪತ್ರದಂತೆ 16ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ನನಗೆ ಮೇಲೆ ಹೇಳಿದ ಕ್ರಯಪತ್ರಗಳಿಗೆ ಸಂಬಂಧಿಸಿದ ಎಲ್ಲಾ ಪಕ್ಷಕಾರರ ಬಗ್ಗೆ ಮಾಹಿತಿ ಇದ್ದರೂ ನಾನು counter claim ಕೇಳುವ ಸಂದರ್ಭದಲ್ಲಿ ಈ ಎಲ್ಲಾ ವ್ಯಕ್ತಿಗಳನ್ನು ದಾವಾದಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

13. ಸರ್ವೆ ನಂ: 29ರ ಜಮೀನು ತೋಟಿ ಇನಾಮತಿ ಜಮೀನು ಆಗಿದೆ. ದಿ: 14.6.1984ರಂದು ತಹಶೀಲ್ದಾರ್ ರವರು ಈ ಜಮೀನಿಗೆ ಸಂಬಂಧಿಸಿದಂತೆ ಮಾಡಿರುವ regrant ಆದೇಶವನ್ನು ನನ್ನ ತಂದೆ ಮತ್ತು ಅಜ್ಜಿ ಪ್ರಶ್ನಿಸಿದ್ದರು. ಆ ಬಗ್ಗೆ ನನ್ನ ಬಳಿ ದಾಖಲೆ ಇದೆ

ಮತ್ತು ಸದರಿ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ತಂದೆ ಮತ್ತು ಅಜ್ಜಿಯವರು ಅಂತಹ regrant ಆದೇಶವನ್ನು ಪ್ರಶ್ನೆ ಮಾಡಿರಲಿಲ್ಲ ಹಾಗು ನಾನು ಈ ಬಗ್ಗೆ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

14. ಮುನಿಗ ಅಲಿಯಾಸ್ ಚಿಕ್ಕತಾಯಪ್ಪನವರ ಹೆಸರಿಗೆ ಮರುಮಂಜೂರಾತಿ ಆಗಿದ್ದ ಬಗ್ಗೆ ದಾಖಲೆ ಇದೆ. ಅವರ ಹೆಸರಿಗೆ ಯಾವುದೇ ಮರುಮಂಜೂರಾತಿ ಆಗಿರಲಿಲ್ಲ ಹಾಗು ನಾನು ಈ ಬಗ್ಗೆ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. 4 ಮತ್ತು 6ನೇ ಪ್ರತಿವಾದಿಯರು ಸರ್ವೆ ನಂಃ29ರ (ದಾವಾ ಐಟಂಃ 4) ಜಮೀನನ್ನು ದಿಃ 4.6.2000ರ ಕ್ರಯಪತ್ರದಂತೆ 8ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು ದಾಖಲೆ ಸೃಷ್ಟಿಸಿದ್ದಾರೆ. 8ನೇ ಪ್ರತಿವಾದಿಯ ಮರಣಾನಂತರ 9ನೇ ಪ್ರತಿವಾದಿ ಮತ್ತು ದಾಮಗುಂಟ ವೆಂಕಟಶೇಷಾರೆಡ್ಡಿಯವರು ಸದರಿ ಸ್ವತ್ತನ್ನು ದಿಃ26.9.2003ರ ಕ್ರಯಪತ್ರದಂತೆ 17ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು ದಾಖಲೆಯನ್ನು ಸೃಷ್ಟಿಸಿದ್ದಾರೆ.

15. 2ನೇ ವಾದಿ ಮತ್ತು ಅವರ ವಾರಸುದಾರರು ಸರ್ವೆ ನಂಃ 29ರ (ದಾವಾ ಐಟಂಃ 5) ಸ್ವತ್ತನ್ನು ದಿಃ 19.10.2000ರ ಕ್ರಯಪತ್ರದಂತೆ 9ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. 9ನೇ ಪ್ರತಿವಾದಿಯು ಸದರಿ ಸ್ವತ್ತನ್ನು ದಿಃ27.8.2003ರ ಕ್ರಯಪತ್ರದಂತೆ 17ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು ದಾಖಲೆಯನ್ನು ಸೃಷ್ಟಿಸಿದ್ದಾರೆ.

16. ಅಕ್ಕಮ್ಮನವರು ಬದುಕಿದ್ದ ಕಾಲದಲ್ಲಿ ದಾವಾ ಸ್ವತ್ತುಗಳಲ್ಲಿ ಭಾಗ ಕೇಳಿ ಯಾವುದೇ ದಾವಾ ಸಲ್ಲಿಸಿರಲಿಲ್ಲ. ದಾವಾ ಐಟಂಃ 4ರ ಸ್ವತ್ತು 6ನೇ ಪ್ರತಿವಾದಿಗೆ ಮಂಜೂರಾಗಿದ್ದ ಜಮೀನು ಆಗಿತ್ತು ಹಾಗು ಆ ಕಾರಣದಿಂದ ನಮಗೆ ಆ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸುಳ್ಳು. ದಾವಾ ಐಟಂಃ 5ರ ಸ್ವತ್ತು 2ನೇ ವಾದಿಗೆ ಮಂಜೂರಾಗಿದ್ದ ಜಮೀನು ಆಗಿತ್ತು ಹಾಗು ಆ ಕಾರಣದಿಂದ ನಮಗೆ ಆ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸುಳ್ಳು.

17. ಈಗ ಎಲ್ಲಾ ದಾವಾ ಸ್ವತ್ತುಗಳ ಭೂಪರಿವರ್ತನೆ ಆಗಿದೆ ಮತ್ತು ಅದರಲ್ಲಿ ಹಲವಾರು ಕಟ್ಟಡಗಳು ಇವೆ ಎಂದರೆ ಸುಳ್ಳು. ಆ ಕಾರಣದಿಂದ ನಾವು ದಾವಾ ಸ್ವತ್ತುಗಳಲ್ಲಿ ಯಾವುದೇ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಮತ್ತು ಅವುಗಳಲ್ಲಿ ಪಾಲು ಕೇಳಲು ಹಕ್ಕು ಹೊಂದಿಲ್ಲ ಎಂದರೆ ಸುಳ್ಳು. ದಾವಾ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳಲ್ಲ ಮತ್ತು ಆ ಕಾರಣದಿಂದ ಅಕ್ಕಮ್ಮನವರಿಗೆ ಆ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸುಳ್ಳು. ಅಕ್ಕಮ್ಮನವರು ತೀರಿಕೊಂಡ ಬಳಿಕ ನಾನು ವಾದಿಯರೊಂದಿಗೆ ಶಾಮೀಲಾಗಿ ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ನನಗೆ ಯಾವುದೇ ಅಧಿಕಾರ ಪತ್ರವನ್ನು ನೀಡಿಲ್ಲ ಎಂದರೆ ಸುಳ್ಳು. ನನಗೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಾಡಿರುವ ಕ್ರಯಪತ್ರಗಳ ಬಗ್ಗೆ ಮತ್ತು ದಾವಾ ಸ್ವತ್ತುಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 2 ರಿಂದ 4ನೇ ಪ್ರತಿವಾದಿಯರ ತಂದೆ-ತಾಯಿಗಳ ಸ್ವಯಾರ್ಜಿತ ಸ್ವತ್ತುಗಳಾಗಿರುವ ಕಾರಣದಿಂದ ನಮಗೆ ಅವುಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

18. ನನ್ನ ತಂದೆಯವರು ಆರೋಗ್ಯವಾಗಿದ್ದಾರೆ ಎಂದರೆ ಸುಳ್ಳು. ನಾನು ಅಧಿಕಾರ ಪತ್ರವನ್ನು ಸೃಷ್ಟಿಮಾಡಿಕೊಂಡು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸುಳ್ಳು. ನನ್ನ ಸಾಕ್ಷ್ಯ ಹೇಳಿಕೆ ಬಾಬ್ತು ಸಲ್ಲಿಸಿರುವ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಇತರ ಪಕ್ಷಕಾರರು ಮತ್ತು ಅವರ ಪರ ವಕೀಲರು ಗೈರುಹಾಜರಾಗಿರುತ್ತಾರೆ**.** ಆದ್ದರಿಂದ ಇತರ ಪಕ್ಷಕಾರರ ಪರ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ**.**

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.